# ✳ ಯಾರು ದೇವಿ ಭಗವತಿಯೋ, ಅವರೇ ಶಾರದಾ, ಸರಸ್ವತಿ ✳

**ಸ್ವಾಮಿ ಚೇತನಾನಂದ**

**ಅನುವಾದ: ಪ್ರವ್ರಾಜಿಕಾ ಶಾಶ್ವತಪ್ರಾಣಾ**

ಶ್ರೀಮಾತೆಯ ನಿಜಸ್ವರೂಪವೇನು? ಇತರ ಸ್ತ್ರೀಯರಂತೆ ಈಕೆಯೂ ಮಾನವೀಯ ಕುಂದುಕೊರತೆಗಳನ್ನು ಹೊಂದಿದ್ದ ಒಬ್ಬ ಸಾಮಾನ್ಯ ಮಹಿಳೆಯೆ? ಎಲ್ಲ ಆಯಾಮಗಳಿಂದ ಶ್ರೀಮಾತೆಯ ದೈವೀಸ್ವರೂಪವನ್ನು ಪರಿಚಯಿಸುವ ಈ ಲೇಖನವನ್ನು ಬರೆದವರು ಅಮೆರಿಕದಲ್ಲಿ ವೇದಾಂತಪ್ರಚಾರವನ್ನು ಮಾಡುತ್ತಿರುವ ಸ್ವಾಮಿ ಚೇತನಾನಂದರು. ಕನ್ನಡಕ್ಕೆ ಅನುವಾದ ಮಾಡಿರುವವರು ಕೇರಳದ ತ್ರಿಶೂರಿನ ಶ್ರೀಶಾರದಾಮಠದ ಹಿರಿಯ ಸಂನ್ಯಾಸಿನಿ.

'ದುರ್ಗಾಸಪ್ತಶತಿ' ಅಥವಾ 'ಚಂಡಿ' ಎಂಬ ಗ್ರಂಥದಲ್ಲಿ ದೇವಿಯು ವಿವಿಧ ನಾಮಗಳಿಂದ ವರ್ಣಿಸಲ್ಪಟ್ಟಿರುವಳು: ದುರ್ಗಾ, ಕಾಳಿ, ಚಾಮುಂಡಾ, ಲಕ್ಷ್ಮಿ, ಸರಸ್ವತಿ, ಶಿವದೂತಿ, ಶಾಕಾಂಬರಿ, ಅಂಬಿಕಾ, ಕಾತ್ಯಾಯನಿ, ಗೌರಿ, ಜಗದ್ಧಾತ್ರಿ, ಬ್ರಹ್ಮಾಣಿ, ವೈಷ್ಣವಿ, ಮಹಾಮಾಯಾ, ಮಂಗಳಾ, ಜಯಂತಿ ಇತ್ಯಾದಿ. ದೈತ್ಯರಾಜ ಶುಂಭನು ದೇವಿಯನ್ನು ಕುರಿತು, "ನೀನು ಗರ್ವಪಡಬೇಡ. ಕೇವಲ ಬೇರೆ ದೇವಿಯರ ಶಕ್ತಿಯ ಸಹಾಯದಿಂದ ನೀನು ಯುದ್ಧವನ್ನು ಮಾಡುತ್ತಿರುವೆ" ಎಂದು ಹಂಗಿಸಿದಾಗ, ದೇವಿಯು—**ಏಕೈವಾಹಂ ಜಗತ್ಯತ್ರ ದ್ವಿತೀಯಾ ಕಾ ಮಮಾಪರಾ** "ಈ ಜಗತ್ತಿನಲ್ಲಿ ಏಕಮಾತ್ರವಾಗಿ ನಾನೇ ವಿರಾಜಮಾನಳಾಗಿರುವುದು. ನಾನಲ್ಲದೆ ಬೇರೆ ಯಾರಿರುವರು? ಸಕಲ ದೇವಿಯರೂ ನನ್ನ ವಿಭಿನ್ನ ಶಕ್ತಿಗಳಷ್ಟೆ. ನೋಡಿಲ್ಲಿ, ಇವರೆಲ್ಲ ನನ್ನಲ್ಲೇ ಲೀನರಾಗಿ ಹೋಗುತ್ತಿರುವರು" ಎಂದು ಆ ಅದ್ಭುತವನ್ನು ತೋರಿ ನುಡಿದಳು.

ನಾವು ಶ್ರೀಶಾರದಾದೇವಿಯ ಸಮಗ್ರ ಜೀವನ ಚರಿತ್ರೆಯನ್ನು ಪಠಿಸಿದಾಗ ಅವರೂ ಸಹ ಸರಸ್ವತಿ, ಕಾಳಿ, ಲಕ್ಷ್ಮಿ, ಬಗಲಾ, ಜಗದ್ಧಾತ್ರಿ, ತ್ರಿಪುರಸುಂದರಿ, ದುರ್ಗಾ, ಭಗವತಿ, ಸೀತಾ, ರಾಧಾ, ವಿಷ್ಣುಪ್ರಿಯಾ, ಉಮಾ, ಸತೀ, ಮಹಾಮಾಯಾ, ಜಗದಂಬಾ, ಪರ್ವತವಾಸಿನಿ ಎಂಬೆಲ್ಲ ಹೆಸರುಗಳಿಂದ ಕರೆಸಿಕೊಂಡಿರುವುದನ್ನು ಗಮನಿಸುತ್ತೇವೆ. ಒಮ್ಮೆ ಸ್ವಾಮಿ ಕೇಶವಾನಂದರು ಶ್ರೀಮಾತೆಯನ್ನು ಕುರಿತು, "ಅಮ್ಮಾ, ನಿಮ್ಮ ಅವತಾರದ ಅನಂತರ ಷಷ್ಠೀ, ಶೀತಲಾ ಮುಂತಾದ ಗ್ರಾಮದೇವತೆಯರನ್ನು ಇನ್ನಾರೂ ಆರಾಧಿಸುವುದಿಲ್ಲ" ಎಂದಾಗ, "ಏಕೆ ಹಾಗೆ ಹೇಳುವೆ? ಅವರೆಲ್ಲ ನನ್ನ ಅಂಶಗಳೇ" ಎಂದರು ಶ್ರೀಮಾತೆ.

'ಸಾರದಾ' ನಾಮದ ಅರ್ಥವೇನು? 'ಸಾ' ಸಾಮೀಪ್ಯದ ಸಂಕೇತ. 'ಸ' ಪದಕ್ಕೆ ಸಾಧನೆ, ಸಹಿಷ್ಣುತೆ, ಸೇವಾಭಾವ, ಸತ್‌ದೃಷ್ಟಿ, ಸದಾಚಾರ, ಸರಳತೆ ಹಾಗೂ ಹಸಿರು ಅಥವಾ ತಾರುಣ್ಯವೆಂದೂ, ಶುಭ್ರ ಅಥವಾ ಶುಚಿತ್ವವೆಂದೂ ಅರ್ಥವಿದೆ. ಈ ದೈವೀ ಗುಣಗಳ ಪ್ರತೀಕವಾಗಿರುವವಳ ಧ್ಯಾನದಿಂದ ಭಕ್ತಿಮಾರ್ಗದಲ್ಲಿ ಹೇಳಿರುವ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಹಾಗೂ ಸಾಯುಜ್ಯ ಲಭಿಸಿ ಮುಕ್ತಿಯುಂಟಾಗುವುದು. 'ರ' ಎಂದರೆ ರಕ್ಷಣೆ. ಕಾಮಕ್ರೋಧಾದಿ ಅರಿಷಡ್ವರ್ಗಗಳಿಂದ, ಆಪತ್ತು ವಿಪತ್ತುಗಳಿಂದ ರೋಗ, ಶೋಕ, ಜರಾಮೃತ್ಯುಗಳಿಂದ ಅವಳು ರಕ್ಷಿಸುವವಳು. 'ದಾ' ಎಂದರೆ ದಾನ. ಜ್ಞಾನ, ಭಕ್ತಿ, ವಿವೇಕ, ವೈರಾಗ್ಯ, ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಹಾಗು ಸಾತ್ವಿಕವಾದ ಆನಂದವನ್ನು ನೀಡುವವಳು ಎಂದರ್ಥ. ಜೀವಿಗಳನ್ನು ಹೊತ್ತು, ಪೋಷಿಸಿ, ರಕ್ಷಿಸುವವಳೇ 'ಸಾರದಾ'.

ವೇದಾಂತ ಶಾಸ್ತ್ರಗಳಲ್ಲಿ ತತ್ತ್ವನಿರೂಪಣೆಗಾಗಿ ಶ್ರುತಿವಾಕ್ಯಗಳು, ಯುಕ್ತಿಯಿಂದ ಬಂದ ಅರಿವು, ಅನುಭವದ ಅರಿವು ಹಾಗೂ ಸ್ವಸಂವೇದ್ಯ (ನಮಗೇ ತಿಳಿಯುವ) ಮತ್ತು ಪರಸಂವೇದ್ಯ (ಇತರರಿಂದ ತಿಳಿಯುವ) ಎಂಬ ಪ್ರಮಾಣಗಳನ್ನು ಬಳಸುತ್ತಾರೆ. ಅದೇ ರೀತಿಯಲ್ಲಿ ಶ್ರೀಮಾತೆಯ ಕುರಿತಾದ ಶ್ರೀರಾಮಕೃಷ್ಣರ ಮಾತುಗಳು, ಸ್ವಯಂ ಶಾರದಾದೇವಿಯವರು ತಮ್ಮ ಬಗ್ಗೆ ಹೇಳಿರುವ ನುಡಿಗಳು, ಸನ್ಯಾಸಿ ಶಿಷ್ಯರ ಮತ್ತು ಅನೇಕ ಭಕ್ತರ ನುಡಿಗಳು, ದರ್ಶನಗಳು ಹಾಗೂ ಅನುಭವಗಳ ಮೂಲಕ ಶ್ರೀಮಾತೆ ಶಾರದಾದೇವಿಯವರ ನಿಜಸ್ವರೂಪವನ್ನು ತಿಳಿಯಬಹುದು.

### ಶ್ರೀಮಾತೆಯವರ ಬಗ್ಗೆ ಶ್ರೀರಾಮಕೃಷ್ಣರ ನುಡಿಗಳು

ಶ್ರೀರಾಮಕೃಷ್ಣರು ಬೇರೆ ಬೇರೆ ಸಂದರ್ಭಗಳಲ್ಲಿ ಶ್ರೀಮಾತೆಯವರ ಬಗ್ಗೆ ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. "ಅವಳು ಸಾರದಾ, ಸರಸ್ವತಿ. ಜ್ಞಾನವನ್ನು ನೀಡಲು ಬಂದಿರುವಳು. ರೂಪವಂತೆಯಾದರೆ ಅಶುದ್ಧ ಮನಸ್ಸುಳ್ಳವರು ಪಾಪದೃಷ್ಟಿಯಿಂದ ನೋಡುವರು. ಹಾಗೆ ನೋಡಿದಾಗ ಅವರಿಗೆ ಅಮಂಗಳವಾಗದಿರಲಿ ಎಂದು ತನ್ನ ರೂಪವನ್ನು ಮರೆಸಿ ಬಂದಿರುವಳು." "ಅವಳು ಮಹಾಬುದ್ಧಿಮತಿ. ಅವಳು ಬೇರೆ ಯಾರೂ ಅಲ್ಲ. ನನ್ನ ಶಕ್ತಿಯೇ ಆಗಿರುವಳು." "ಮಂದಿರದಲ್ಲಿ ಶೋಭಿಸುತ್ತಿರುವ ಭವತಾರಿಣಿ ಮತ್ತು ನಹಬತ್ತಿನಲ್ಲಿ ವಾಸಿಸುತ್ತಿರುವವಳು (ಶ್ರೀಮಾತೆ) ಬೇರೆಯಲ್ಲ." ತಮ್ಮ ಭಾಗಿನೇಯ ಹೃದಯನಿಗೆ ಹೇಳಿದರು "ಹೃದು, ಇದಕ್ಕೆ (ತಮ್ಮನ್ನು ತೋರಿಸಿಕೊಳ್ಳುತ್ತ) ನೀನು ತುಚ್ಛವಾಗಿ ಮಾತನಾಡುವ ಹಾಗೆ ಅವಳ ಬಗ್ಗೆ ಎಂದಿಗೂ ಮಾಡಬೇಡ. ಇದರ ಒಳಗೆ ಇರುವುದು ಕ್ರೋಧಗೊಂಡರೂ ನಿನಗೆ ರಕ್ಷಣೆ ಸಿಗಬಹುದು, ಆದರೆ ಅವಳ ಒಳಗಿರುವ ಶಕ್ತಿಯು ಬುಸುಗುಟ್ಟಿದಲ್ಲಿ ನಿನ್ನನ್ನು ಹರಿಹರ ಬ್ರಹ್ಮಾದಿಗಳಿಗೂ ರಕ್ಷಿಸಲಾಗುವುದಿಲ್ಲ."

ಷೋಡಶೀ ಪೂಜೆಯ ಸಮಯದಲ್ಲಿ ಶಾರದಾದೇವಿಯಲ್ಲಿದ್ದ ದೈವೀಶಕ್ತಿಯನ್ನು ಶ್ರೀರಾಮಕೃಷ್ಣರು ಪ್ರಾರ್ಥನೆಯ

ಮೂಲಕ ಜಾಗೃತಗೊಳಿಸಿದರು. ಈ ಪೂಜೆಗೆ ಮುಂಚೆ ಶ್ರೀಮಾತೆಯವರು ದೇವಿ ಆಗಿರಲಿಲ್ಲವೆ ಎಂದು ಇಲ್ಲಿ ಪ್ರಶ್ನೆ ಏಳಬಹುದು. ಅವರು ದೇವಿಯೇ ಆಗಿದ್ದರು. ಪೂಜಾಮಂಟಪದಲ್ಲಿ ದುರ್ಗಾ ಪ್ರತಿಮೆಯ ಪ್ರಾಣಪ್ರತಿಷ್ಠೆ ಮಾಡಿ ಪೂಜೆಯ ಮೂಲಕ ಜಾಗೃತಗೊಳಿಸುವಂತೆ ಶ್ರೀರಾಮಕೃಷ್ಣರು ಗುಪ್ತರೂಪದಲ್ಲಿ ಮಾನವ ಶರೀರವನ್ನು ಧರಿಸಿ ಬಂದಿದ್ದ ಶಾರದಾದೇವಿಯ ದಿವ್ಯತೆಯ ಅಭಿವ್ಯಕ್ತಿಗೆ ಅನುವು ಮಾಡಿಕೊಟ್ಟರು.

### ಶ್ರೀಮಾತೆ ತಮ್ಮ ಬಗ್ಗೆ ಹೇಳಿರುವ ನುಡಿಗಳು:

ಶಾರದಾದೇವಿಯವರು ತಮ್ಮನ್ನು ಕುರಿತು ಹೀಗೆ ಹೇಳಿರುವರು: "ನನ್ನ ತಾಯಿ ದೇವಿಯ ದರ್ಶನಕ್ಕಾಗಿ ಶಿಹೋರ್ ಗ್ರಾಮಕ್ಕೆ ಹೋಗಿದ್ದರು. ಹಿಂತಿರುಗಿ ಬರುವಾಗ ದೇವಸ್ಥಾನದ ಬಳಿ ಇರುವ ಬಿಲ್ವ ವೃಕ್ಷದ ಕೆಳಗೆ ಕುಳಿತಿದ್ದರು. ಆಗ ವಾಯುರೂಪದಲ್ಲಿ ಒಂದು ಶಕ್ತಿ ಅವರ ಗರ್ಭವನ್ನು ಹೊಕ್ಕ ಹಾಗೆ ಅನುಭವವಾಗಿ ಅವರ ಉದರವು ಅತಿ ಭಾರವಾಗಿ ತೋರಿತು. ಅಷ್ಟರಲ್ಲಿ ಕೆಂಪು ಸೀರೆಯುಟ್ಟ ಬಹಳ ಸುಂದರಿಯಾದ ಬಾಲಕಿಯೊಬ್ಬಳು ಬಿಲ್ವವೃಕ್ಷದಿಂದ ಇಳಿದು ಬಂದು, ಹಿಂದಿನಿಂದ ನನ್ನ ತಾಯಿಯ ಕತ್ತನ್ನು ತನ್ನ ಕೋಮಲವಾದ ಕೈಗಳಿಂದ ತಬ್ಬಿಕೊಂಡು ಹೇಳಿದಳು: 'ಅಮ್ಮ ನಾನು ನಿನ್ನ ಮನೆಗೆ ಬಂದೆ.' ಆಗ ನನ್ನ ತಾಯಿ ಪ್ರಜ್ಞಾಶೂನ್ಯಳಾದಳು. ಇದರ ಫಲದಿಂದ ನಾನು ಜನಿಸಿದೆ."



ಶ್ರೀಮಾತೆಯ ಜನ್ಮ ಹಾಗು ಕರ್ಮ ದಿವ್ಯವಾದುವು. ಶ್ರೀಕೃಷ್ಣನು ಗೀತೆಯಲ್ಲಿ **ಜನ್ಮ ಕರ್ಮ ಚ ಮೇ ದಿವ್ಯಂ**—ಯಾರು ನನ್ನ ದಿವ್ಯ ಅವತಾರ ಹಾಗೂ ಕ್ರಿಯೆಯನ್ನು ತಿಳಿಯುತ್ತಾರೋ, ಎಂದು ಹೇಳಿರುವನು. ಅಂತೆಯೇ ಶ್ರೀಮಾತೆಯ ಕುರಿತು ತಿಳಿಯುವುದು ಕಷ್ಟಸಾಧ್ಯ. ಅವರೇ ಹೇಳುವಂತೆ, 'ಕೆಲವೊಮ್ಮೆ ನನಗೇ ಅನ್ನಿಸುವುದು, ನಾನು ರಾಮಚಂದ್ರ ಮುಖರ್ಜಿಯವರ ಮಗಳಲ್ಲವೇ, ನನ್ನ ಸಮವಯಸ್ಕರು ಅನೇಕರು ಈ ಜಯರಾಂಬಾಟಿಯಲ್ಲಿರುವರು. ಅವರಿಗೂ ನನಗೂ ಏನು ವ್ಯತ್ಯಾಸ? ಎಲ್ಲೆಲ್ಲಿಂದಲೋ ಭಕ್ತರು ಬಂದು ನನಗೆ ಪ್ರಣಾಮ ಮಾಡುವರು! ಅವರೆಲ್ಲ ದೊಡ್ಡ ಹುದ್ದೆಗಳಲ್ಲಿರುವ ವಕೀಲರು, ಉನ್ನತ ಅಧಿಕಾರಿಗಳು. ಇವರೆಲ್ಲ ಇಲ್ಲಿಗೇ ಏಕೆ ಬರುವರು?" ಒಮ್ಮೆ ಭಕ್ತ ಮಹಿಳೆಯೊಬ್ಬಳು ಶ್ರೀಮಾತೆಯವರನ್ನು ಪ್ರಶ್ನಿಸಿದಳು. "ಅಮ್ಮ, ನೀವು ಸ್ವಯಂ ಭಗವತಿ ಎನ್ನುವುದು ನಮಗೆ ಅನುಭವವಾಗುತ್ತಿಲ್ಲವಲ್ಲ?" ಅದಕ್ಕೆ ಮಾತೆಯವರು ಉತ್ತರಿಸಿದರು "ಎಲ್ಲರಿಗೂ ಗುರುತಿಸಲು ಆಗುವುದೇ ಮಗು? ಸ್ನಾನದ ಘಟ್ಟದಲ್ಲಿ ಒಂದು ವಜ್ರದ ಕಲ್ಲು ಬಿದ್ದಿತ್ತು. ಅಲ್ಲಿಗೆ ಬರುವವರೆಲ್ಲ ಅದು ಸಾಧಾರಣ ಕಲ್ಲು ಎಂದು ಭಾವಿಸಿ ಅದರ ಮೇಲೆ ಕಾಲುಜ್ಜಿ, ತೊಳೆದು ಸ್ನಾನಮಾಡಿ ಹೋಗುತ್ತಿದ್ದರು. ಒಂದು ದಿನ ಒಬ್ಬ ರತ್ನಪಡಿ ವ್ಯಾಪಾರಿಯು ಅದನ್ನು ನೋಡಿದ. ಅದು ಅತ್ಯಂತ ಬೆಲೆ ಬಾಳುವ ವಜ್ರವೆಂದು ಕ್ಷಣದಲ್ಲಿ ಗುರುತಿಸಿದ. ರಾಮಕೃಷ್ಣರು ಸಾಕ್ಷಾತ್ ಭಗವಾನರು, ನಾನು ಮತ್ತೆ ಯಾರು? ನಾನೂ ಸಹಾ ಭಗವತಿ" ಎಂದರು.

ಉದ್ಬೋಧನದಲ್ಲಿ ಶ್ರೀಮಾತೆ ಶ್ರೀರಾಮಕೃಷ್ಣರ ಪೂಜೆ ಮಾಡುತ್ತಿರುವಾಗ ಅವರ ಜೊತೆಯಿರುತ್ತಿದ್ದ ಹುಚ್ಚಿ ಅತ್ತೆಯು (ಸುರಬಾಲಾ) ಶ್ರೀಮಾತೆಯನ್ನು ಅತ್ಯಂತ ಕಠೋರವಾಗಿ ದೂಷಿಸಿದಳು. ಪೂಜೆಯ ನಂತರ ಮಾತೆ, "ಎಂತೆಂತಹ ಋಷಿಮುನಿಗಳಿಗೂ ಸಹ ತೀವ್ರವಾದ ತಪಸ್ಸಿನಿಂದಲೂ ನನ್ನನ್ನು ಪಡೆಯಲಾಗುವುದಿಲ್ಲ. ನಿಮಗೆ ನಾನು ಸಿಕ್ಕಿದ್ದರೂ ಕಳೆದುಕೊಳ್ಳುತ್ತಿರುವಿರಿ" ಎಂದರು. ಮತ್ತೊಮ್ಮೆ ಕಾಶಿಯಲ್ಲಿರುವಾಗ ಹುಚ್ಚಿ ಅತ್ತೆಯು ಕೋಪಿಷ್ಠಳಾಗಿ 'ಠಾಕೂರಿಣಿ (ಶ್ರೀಮಾತೆ) ಸಾಯಲಿ, ಠಾಕೂರಿಣಿ ಸಾಯಲಿ" ಎಂದು ಶಪಿಸತೊಡಗಿದಳು. ಇದನ್ನು ಕೇಳಿದ ಶ್ರೀಮಾತೆ, ನಂತರ ಭಕ್ತರನ್ನು ಉದ್ದೇಶಿಸಿ "ಇವಳಿಗೆ ಗೊತ್ತಿಲ್ಲ; ನಾನು ಮೃತ್ಯುವನ್ನು ಗೆದ್ದಿರುವವಳು ಎಂದು" ಎಂದರು. ಒಂದು ದಿನ ರಾಧುವಿನ ಹಠದ ಪ್ರಸಂಗದಲ್ಲಿ ಹೇಳಿದರು, "ಈ ಶರೀರ ದೇವಶರೀರ ಎಂದು ನಿನಗೆ ತಿಳಿದಿದೆಯೇನು? ಭಗವಂತನಿಗಲ್ಲದೆ ಸಾಧಾರಣ ಮನುಷ್ಯನಿಗೆ ಇಂತಹ ಕಷ್ಟಗಳನ್ನು ಸಹಿಸಲು ಆಗುವುದೆ?"

### ಸಂನ್ಯಾಸಿಗಳ ಹಾಗೂ ಭಕ್ತರ ದರ್ಶನ ಮತ್ತು ಅನುಭವಗಳು

ಶ್ರೀರಾಮಕೃಷ್ಣರು ಭಕ್ತರಿಗೆ ಅನೇಕ ರೂಪಗಳ ಮೂಲಕ ದರ್ಶನ ನೀಡಿರುವರು. ಶಿವ, ಕಾಳಿ, ಕೃಷ್ಣ, ರಾಧಾ, ಸೀತಾ, ಗೋಪಾಲ, ಚೈತನ್ಯ, ಏಸು ಮುಂತಾದ ರೂಪಗಳಿಂದ ಭಕ್ತರನ್ನು ಅನುಗ್ರಹಿಸಿರುವರು. ಹಾಗೆಯೇ ಶಾರದಾದೇವಿಯವರೂ

ಜಗದ್ಧಾತ್ರೀ, ಕಾಳಿ, ಸರಸ್ವತಿ, ಬಗಲಾ ಹೀಗೆ ಹಲವು ದೇವಿಯರ ರೂಪಗಳಿಂದ ಭಕ್ತರಿಗೆ ದರ್ಶನ ನೀಡಿರುವರು.

ರಾಧುವಿನ ಚಿಕಿತ್ಸೆಗಾಗಿ ಶ್ರೀಮಾತೆ ಬಾಂಕುರಾ ಗ್ರಾಮಕ್ಕೆ ಹೋದಾಗ ಜೊತೆಯಲ್ಲಿ ಶಿಷ್ಯ (ಸ್ವಾಮಿ ಪರಿಪ್ರೇಮಾನಂದ) ರನ್ನು ಕರೆದುಕೊಂಡು ಹೋಗಿದ್ದರು. ಒಂದು ದಿನ ಸಂಧ್ಯಾ ಸಮಯದಲ್ಲಿ, ವಾತರೋಗದಿಂದ ನರಳುತ್ತಿದ್ದ ಶ್ರೀಮಾತೆಯ ಕಾಲುಗಳಿಗೆ ತೈಲವನ್ನು ಸವರಿ ಮಾಲೀಸು ಮಾಡುತ್ತಿರುವಾಗ ಶಿಷ್ಯನ ಮನಸ್ಸಿನಲ್ಲಿ "ಈ ರೋಗಪೀಡಿತ ಕೃಶ ಶರೀರದ ಇವರು ನಿಜವಾಗಿ ಜಗಜ್ಜನನಿಯೇ?" ಎಂಬ ಪ್ರಶ್ನೆ ಮೂಡಿತು. ನಂತರ ಆದ ಅನುಭವವನ್ನು ಶಿಷ್ಯನ ಮಾತಿನಲ್ಲೇ ಕೇಳೋಣ— "ಶ್ರೀಮಾತೆಯ ಪಾದಗಳನ್ನು ನನ್ನ ಕೈಗಳಿಂದ ಮೆಲ್ಲನೆ ಸವರುತ್ತಿದ್ದೆ. ಸ್ವಲ್ಪ ಸಮಯದ ನಂತರ ಆ ಚರಣಗಳು ವಯಸ್ಸಾದವರ ಚರಣಗಳಲ್ಲವೆಂದು ಅನುಭವವಾಗತೊಡಗಿತು. ಆರೋಗ್ಯದಿಂದ ಕೂಡಿದ ಯುವತಿಯೋರ್ವಳ ಪಾದಗಳೆಂದು ತೋರಿತು. ಅಲ್ಲೇ ಹತ್ತಿರವಿದ್ದ ಲಾಂದ್ರದ ಬೆಳಕಿನಿಂದ ಸ್ಪಷ್ಟವಾಗಿ ನೋಡಿದೆ: ಅಲ್ತಾದಿಂದ (ಕಾಲಿಗೆ ಹಚ್ಚುವ ಕೆಂಪು ಬಣ್ಣ) ಅಲಂಕೃತವಾದ ಅಪರೂಪವಾದ ಚರಣಗಳು; ಗುಂಡಾದ ಸುಂದರವಾದ ಕಾಲು ಬೆರಳುಗಳಲ್ಲಿ ರತ್ನಗಳಂತೆ ಅರ್ಧಚಂದ್ರಾಕಾರದಲ್ಲಿ ಹೊಳೆಯುತ್ತಿರುವ ಉಗುರುಗಳು. ಮುತ್ತು, ರತ್ನಗಳಿಂದ ಖಚಿತವಾದ ನೂಪುರಗಳಿಂದ ಆ ಚರಣಗಳು ಅಲಂಕೃತವಾಗಿದ್ದವು. ನಾನು ವಿಸ್ಮಯದಿಂದ ಮಾತೆಯವರ ಶ್ರೀಮುಖದತ್ತ ನೋಡಿದೆ... ಸ್ವರ್ಣಕಾಂತಿಯಿಂದ ಕೂಡಿದ ತ್ರಿನಯನಿ! ನಾನಾ ಬಗೆಯ ಶಸ್ತ್ರ-ಅಸ್ತ್ರಗಳನ್ನು ಧರಿಸಿದ ಚತುರ್ಭುಜೆಯಾಗಿ, ವರಾಭಯಳಾಗಿ, ನಾನಾ ಅಲಂಕಾರಗಳಿಂದ ಶೋಭಿತಳಾಗಿ, ಜಗದ್ಧಾತ್ರಿಯ ರೂಪದಲ್ಲಿ ವಿರಾಜಿಸುತ್ತಿದ್ದರು. ತಲೆಯಲ್ಲಿ ರತ್ನಖಚಿತ ಕಿರೀಟ ಪ್ರಜ್ವಲಿಸುತ್ತಿತ್ತು. ದೇವಿಯ ಆ ದಿವ್ಯ ಶರೀರದಿಂದ ಅಪರೂಪವಾದ ಜ್ಯೋತಿಯು ಸ್ಫುರಿಸುತ್ತಿತ್ತು. ಇನ್ನೂ ಚೆನ್ನಾಗಿ ನೋಡಬೇಕು ಎಂದು ಅಂದುಕೊಳ್ಳುವಷ್ಟರಲ್ಲೇ ನಾನು ಪ್ರಜ್ಞಾಹೀನನಾದೆ."

ಒಮ್ಮೆ ಶಿಷ್ಯ ಚಂದ್ರಮೋಹನ ದತ್ತನು ಶ್ರೀಮಾತೆಯ ಸಂಗಡ ಕೋಯಲ್‌ಪಾರಾದಿಂದ ವಿಷ್ಣುಪುರಕ್ಕೆ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ದಾರಿಯಲ್ಲಿ ಗಾಡಿಯನ್ನು ನಿಲ್ಲಿಸಿದಾಗ, ಮರದ ನೆರಳಿನಲ್ಲಿ ಶ್ರೀಮಾತೆಯವರು ವಿಶ್ರಮಿಸಿಕೊಳ್ಳುತ್ತಿದ್ದರು. ಅವರು ಹಾಗೆ ಪ್ರಸನ್ನರಾಗಿದ್ದ ಸಮಯವನ್ನು ನೋಡಿ ಚಂದ್ರನು ಅವರ ಬಳಿಸಾರಿ ದೈನ್ಯದಿಂದ "ಅಮ್ಮ, ನಿಮ್ಮ ನಿಜಸ್ವರೂಪವನ್ನು ದರ್ಶಿಸುವುದೇ ನನ್ನ ಕೊನೆಯ ಆಸೆ" ಎಂದು ಬೇಡಿದನು. ಮೊದಲು ಶಾರದಾದೇವಿಯವರು ಅದಕ್ಕೆ ಸಮ್ಮತಿಸದಿದ್ದರೂ, ಬಹಳ ಪೀಡಿಸಿದಾಗ ಒಪ್ಪಿಗೆಯಿತ್ತು, ಅಲ್ಲಿದ್ದ ಇತರರಿಗೆ ಹೇಳಿದರು, "ನೀವುಗಳು ಇಲ್ಲಿಂದ ಸ್ವಲ್ಪ ದೂರ ಹೋಗಿ. ನನಗೆ ಇವನ ಬಳಿ ಸ್ವಲ್ಪ ಮಾತನಾಡುವುದಿದೆ." ಅವರೆಲ್ಲ ಹೋದಮೇಲೆ ಚಂದ್ರನಿಗೆ "ಇದನ್ನು ನಿನಗೆ ಮಾತ್ರ ನೋಡಲು ಸಾಧ್ಯ. ಅವರಿಗಾರಿಗೂ ಆ ಸೌಲಭ್ಯ ಇಲ್ಲ. ಆದರೆ ನನ್ನ ನಿಜ ಸ್ವರೂಪವನ್ನು ನೋಡಿ ನೀನು ಭೀತನಾಗಕೂಡದು ಮತ್ತು ನೀನು ಕಂಡದ್ದನ್ನು ನಾನು ಬದುಕಿರುವ ತನಕ ಯಾರಿಗೂ ಹೇಳಕೂಡದು" ಎಂದು ಹೇಳಿ ಶ್ರೀಮಾತೆ ಅವನ ಮುಂದೆ ಜಗದ್ಧಾತ್ರಿಯ ರೂಪವನ್ನು ತಾಳಿ ಅನುಗ್ರಹಿಸಿದರು.

ಭಕ್ತರಾದ ಸುರೇಂದ್ರನಾಥ ಸೇನರು ಮಂತ್ರದೀಕ್ಷೆಗಾಗಿ ಸ್ವಾಮಿ ವಿವೇಕಾನಂದರನ್ನು ಸಮೀಪಿಸಿದರು. ದೀಕ್ಷೆಗೆ ಎಲ್ಲಾ ಸಿದ್ಧತೆಗಳೂ ನಡೆದವು. ಸ್ವಾಮಿಜಿ ಆಸನದಲ್ಲಿ ಧ್ಯಾನಸ್ಥರಾಗಿ ಕುಳಿತರು. ಸ್ವಲ್ಪ ಸಮಯದ ನಂತರ ಕಣ್ಣು ತೆರೆದು 'ನೋಡು, ನಿನ್ನ ಗುರು ನಾನಲ್ಲ. ನನಗಿಂತಲೂ ಮಹತ್ತಾದ ವ್ಯಕ್ತಿಯಿಂದ ನೀನು ದೀಕ್ಷೆ ಪಡೆಯುವೆ ಎಂದು ಶ್ರೀರಾಮಕೃಷ್ಣರು ತೋರಿದರು.'' ಹೀಗೆ ಹೇಳಿ ದೀಕ್ಷೆ ಕೊಡಲು ನಿರಾಕರಿಸಿದರು. ಅವರ ಅನುಗ್ರಹದಿಂದ ವಂಚಿತರಾದ ಸುರೇಂದ್ರ ಮುಂದೇನೆಂದು ತಿಳಿಯದೆ ಬಹಳವಾಗಿ ದುಃಖಿತರಾದರು. ನಂತರ ಸಂಸಾರದ ಜಂಜಾಟದಲ್ಲಿ ಸಿಕ್ಕಿ ತೊಳಲುತ್ತಿರುವಾಗ, ಒಂದು ರಾತ್ರಿ ಅವರ ಸ್ವಪ್ನದಲ್ಲಿ ಉಜ್ವಲವಾದ ದೇವೀಮೂರ್ತಿಯ ದರ್ಶನವಾಗಿ "ಈ ಮಂತ್ರವನ್ನು ಸ್ವೀಕರಿಸು. ನಾನು ಸರಸ್ವತಿ" ಎಂದು ಮಂತ್ರವೊಂದನ್ನು ಉಚ್ಚರಿಸಿ ಆಶೀರ್ವಾದ ನೀಡಿತು. ಮುಂದೆ ಸುರೇಂದ್ರ ಜಯರಾಂಬಾಟಿಯಲ್ಲಿ ಶ್ರೀಶಾರದೇವಿಯವರಿಂದ ದೀಕ್ಷೆ ಪಡೆದಾಗ ಸ್ವಪ್ನದಲ್ಲಿ ದೊರೆತ ಮಂತ್ರ ಮತ್ತು ಅವರಿತ್ತ ಮಂತ್ರವೂ ಒಂದೇ ಆಗಿದ್ದುದಲ್ಲದೆ, ಆ ದೇವೀಮೂರ್ತಿಯು ಸಾಕ್ಷಾತ್ ಶ್ರೀಮಾತೆಯವರಾಗಿದ್ದರು ಎಂಬುದನ್ನು ಕಂಡು ಆನಂದಗೊಂಡರು.

ಕೋಯಲ್‌ಪಾರಾದ ಹರಿಪದ ಎನ್ನುವ ಭಕ್ತ ತನ್ನ ಕುಲಗುರುಗಳಿಂದ ದೀಕ್ಷೆ ಪಡೆದಿದ್ದ. ಈತ ಶ್ರೀಮಾತೆಯ ವಾತ್ಸಲ್ಯ ಪ್ರೀತಿಗಳಿಗೆ ಪಾತ್ರನಾಗಿದ್ದ. ಒಂದು ದಿನ ಶ್ರೀಮಾತೆ ಹರಿಪದನಿಗೆ ತಾನು ಪಡೆದಿದ್ದ ಇಷ್ಟಮಂತ್ರವನ್ನು ಉಚ್ಚರಿಸಲು ಹೇಳಿದಾಗ, ಅವನು ನಿಸ್ಸಂಕೋಚವಾಗಿ ಅವರ ಆದೇಶವನ್ನು ಪಾಲನೆ ಮಾಡಿದ. ಅವನ ಮುಂದೆ ನಿಂತಿದ್ದ ಶ್ರೀಮಾತೆ ಶಾರದಾದೇವಿ ಅವನಿಗೆ ಶ್ರೀದುರ್ಗಾರೂಪದಿಂದ ದರ್ಶನ ಕೊಟ್ಟು ಅವನನ್ನು ಅನುಗ್ರಹಿಸಿದರು. ಇಷ್ಟದೇವತೆಯ ಸಾಕ್ಷಾತ್ಕಾರವು ಹೀಗೆ ನಿರಾಯಾಸವಾಗಿ ಆದುದನ್ನು ನೋಡಿ ಹರಿಪದನು ದೇವಿಯ ಪಾದಗಳಲ್ಲಿ ತನ್ನನ್ನೇ ಸಮರ್ಪಣೆ ಮಾಡಿಕೊಂಡನು. (ಮುಂದುವರಿಯುವುದು)

**ಶ್ರೀರಾಮಕೃಷ್ಣರು ಎಲ್ಲ ಜೀವಿಗಳನ್ನು ಜಗನ್ಮಾತೆಯ ವಿವಿಧ ರೂಪಗಳೆಂದು ಪರಿಗಣಿಸುತ್ತಿದ್ದರು. ಭಗವಂತನ ತಾಯ್ತನವನ್ನು ತೋರಿಸಿಕೊಡುವುದಕ್ಕಾಗಿ ಅವರು ನನ್ನನ್ನು ಬಿಟ್ಟುಹೋಗಿದ್ದಾರೆ.**

–ಶ್ರೀಮಾತೆ ಶಾರದಾದೇವಿ